**ಚನ್ನಗಿರಿಯಲ್ಲಿ ನಡೆದ ಕಸ್ಟೋಡಿಯಲ್ ಸಾವಿನ ಬಗ್ಗೆ ಸತ್ಯಶೋಧನಾ ವರದಿ – August 30, 2024**

<u>ವರದಿಯ ಸಾರಾಂಶ</u>

24 ಮೇ 2024 ರಂದು, ಚನ್ನಗಿರಿಯಲ್ಲಿ ಜೂಜಾಟದ ಆರೋಪದ ಮೇಲೆ ವ್ಯಕ್ತಿಯೊಬ್ಬರನ್ನು ಬಂಧಿಸಿದಾಗ , ಆ ವ್ಯಕ್ತಿ ಬಂಧನದಲ್ಲಿರುವಾಗಲೇ ಸಾವನ್ನಪ್ಪಿದ್ದರು. ಈ ಘಟನೆಯಲ್ಲಿ ಮರಣೋತ್ತರ ಪರೀಕ್ಷೆಯ ನಡೆಯುವರೆಗೂ ಮೃತ ವ್ಯಕ್ತಿಯ ಕುಟುಂಬದವರಿಗೆ ಮಾಹಿತಿ ಕೊಟ್ಟಿರಲಿಲ್ಲ.ಈ ಹಠಾತ್ ಕಸ್ಟೋಡಿಯಲ್ ಸಾವು ನಾಗರಿಕರು ಪೊಲೀಸ್ ಠಾಣೆಯ ಹೊರಗೆ ದೊಡ್ಡ ಮಟ್ಟದ ಪ್ರತಿಭಟನೆ ನಡೆಯುವಂತೆ ಪ್ರೇರೆಪಿಸಿತು. ಅಲ್ಲಿ ಸೇರಿದ ಜನಸಮೂಹವು ಶಂಕಿತ ಪೋಲೀಸ್ ದೌರ್ಜನ್ಯದ ವಿರುದ್ದ ಪ್ರತಿಭಟನೆಯನ್ನು ನಡೆಸಿದರು. ಗುಂಪಿನಲ್ಲಿದ್ದ ಕೆಲವರು ಪೊಲೀಸರು ಮತ್ತು ವಾಹನಗಳ ಮೇಲೆ ಕಲ್ಲು ತೂರಿದರು. ಪ್ರತಿಯಾಗಿ, ಕಾನೂನುಬಾಹಿರ ಸಭೆ ಸೇರಿರುವುದು , ಗಲಭೆ ಮಾಡಿರುವುದು ಮತ್ತು ಹಾನಿ ಉಂಟುಮಾಡಿದ ಆರೋಪದಡಿಯಲ್ಲಿ 300 ಜನರ ವಿರುದ್ದ ಎಫ್‌ಐಆರ್‌ಗಳನ್ನು ದಾಖಲಿಸಲಾಯಿತು. ಈ ಪ್ರಕರಣದಲ್ಲಿ

47 ಜನರನ್ನು ಬಂಧಿಸಲಾಗಿದೆ. ಕಸ್ಟೋಡಿಯಲ್ ಸಾವಿನ ತನಿಖೆಯನ್ನು ಸಿಐಡಿ ವಹಿಸಿಕೊಂಡಿದೆ.

ಪರಿಸ್ಥಿತಿಯ ಬಗ್ಗೆ ಕಾಳಜಿಯುಳ್ಳ ಅನೇಕ ನಾಗರಿಕ ಸಮಾಜದ ಗುಂಪುಗಳಾದ - ಅಖಿಲ ಭಾರತ ವಕೀಲರ ಸಂಘ(AILAJ), ನಾಗರಿಕ ಹಕ್ಕುಗಳ ರಕ್ಷಣೆಗಾಗಿ ಸಂಘ(APCR), ಬಹುತ್ವ ಕರ್ನಾಟಕ ಮತ್ತು ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (ಕರ್ನಾಟಕ)(PUCL-K), ಕಸ್ಟಡಿ ಸಾವಿನ ಮತ್ತು ನಂತರದ ಘಟನೆಗಳ ಬಗ್ಗೆ ಸತ್ಯಶೋಧನಾ ಕೈಗೊಳ್ಳಲು ತಂಡ ರಚಿಸಿ , ಸತ್ಯಶೋಧನಾ ನಡೆಸಿ ವರದಿಯನ್ನು ಪ್ರಕಟಿಸಿದೆ.

ವರದಿಯು ಏಳು ವಿಭಾಗಗಳಲ್ಲಿದೆ.

ಭಾಗ 1 : ಪ್ರಕರಣದ ಹಿನ್ನೆಲೆಯನ್ನು ವಿವರಿಸಲಾಗಿದೆ.

ಭಾಗ 2 : ತಂಡವು ಮಾತನಾಡಿದ ವಿವಿಧ ಜನರ ಸಂದರ್ಶನಗಳ ಸಾರಾಂಶ - ಇದರಲ್ಲಿ ಮೃತರ ಕುಟುಂಬ, ಪೊಲೀಸ್ ಅಧಿಕಾರಿಗಳು, ಸಾಕ್ಷಿಗಳು ಮತ್ತು ನಂತರ ಬಂಧಿಸಲ್ಪಟ್ಟವರ ಕುಟುಂಬ ಸದಸ್ಯರು ಸೇರಿದ್ದಾರೆ

ಭಾಗ 3 : ಅಧಿಕೃತ ದಾಖಲೆಗಳು ಮತ್ತು ಸಂದರ್ಶನಗಳ ಆಧಾರದ ಮೇಲೆ ಘಟನೆಗಳ ಟೈಮ್‌ಲೈನ್ ವಿವರ.

ಭಾಗ 4: ಪ್ರಕರಣಕ್ಕೆ ಸಂಬಂಧಿಸಿದ ಅಧಿಕೃತ ದಾಖಲೆಗಳನ್ನು ವಿಶ್ಲೇಷಿಸಲಾಗಿದೆ.

ಭಾಗ 5 : ಕಾನೂನು ಸಂಬಂಧಿತ ಪ್ರಶ್ನೆಗಳನ್ನು ವಿವರಿಸಲಾಗಿದೆ.

ಭಾಗ 6 : ತಂಡದ ಸಂಶೋಧನೆಗಳ ಸಾರಾಂಶ.

ಭಾಗ 7 : ಹಕ್ಕೊತ್ತಾಯಗಳ ಪಟ್ಟಿ.

ಬಂಧನ ಮತ್ತು ದಾಖಲೀಕರಣದ ಕಾರ್ಯವಿಧಾನದಲ್ಲಿ ನಿರ್ಣಾಯಕ ಲೋಪಗಳಿರುವ ಕುರಿತು ವರದಿ ಬೆಳಕು ಚೆಲ್ಲಿದೆ, ಉದಾಹರಣೆಗೆ - ಬಂಧನದ ಸ್ಥಳ ಮತ್ತು ಸಮಯವು ಅಸಮಂಜಸವಾಗಿದೆ. ಈ ಲೋಪಗಳಿಂದಾಗಿ ಸಂತ್ರಸ್ತರ ಸಾಂವಿಧಾನಿಕ ಹಕ್ಕುಗಳಿಗೆ ಧಕ್ಕೆ ಉಂಟಾಗಿದೆ. ತನಿಖಾ ಸಂಸ್ಥೆಗಳು ಪ್ರಕ್ರಿಯೆಯ ಡಾಕ್ಯುಮೆಂಟೇಷನ್ ಅನ್ನು ಸರಿಯಾಗಿ ಕೈಗೊಳ್ಳದಿರುವ ಕಾರಣ ತನಿಖೆಯಲ್ಲಿ ಪಾರದರ್ಶಕತೆಯ ಕೊರತೆ ಎದ್ದು ಕಾಣುತ್ತದೆ .

ಸಂತ್ರಸ್ತರ ಕುಟುಂಬ ಈಗ ಮನೆಯ ಆಧಾರವಾಗಿದ್ದ ಸದಸ್ಯರಿಲ್ಲದೆ ಅತಂತ್ರವಾಗಿದೆ.

ಕಸ್ಟೋಡಿಯಲ್ ಸಾವಿನ ನಂತರದ ಸಾಮೂಹಿಕ ಬಂಧನಗಳಲ್ಲಿ ತನಿಖಾ ಕಾರ್ಯವಿಧಾನದ ಉಲ್ಲಂಘನೆಗಳು ಕಂಡುಬಂದಿದೆ . ಸಾಮೂಹಿಕ ಬಂಧನಗಳು ಅನೇಕ ಬಡ ಕುಟುಂಬಗಳನ್ನು ಆರ್ಥಿಕವಾಗಿ ದುರ್ಬಲಗೊಳಿಸಿವೆ. ವರದಿಯು ಮೃತರ ಕುಟುಂಬಕ್ಕೆ ತಕ್ಷಣದ ಪರಿಹಾರ; ನಂತರದ ಪ್ರತಿಭಟನೆಯಲ್ಲಿ ಆರೋಪಿಗಳಿಗೆ ಸಹಾಯ ಮಾಡುವ ಕ್ರಮಗಳು; ಈ ಇಡೀ ಪ್ರಕರಣದ ಬಗ್ಗೆ ಸಮಗ್ರ ತನಿಖೆ ಮತ್ತು ಈ ಪ್ರಕರಣವು ಎತ್ತಿ ತೋರಿಸಿರುವ ವ್ಯವಸ್ಥಿತ ಸಮಸ್ಯೆಗಳನ್ನು ಪರಿಹರಿಸಲು ಒತ್ತಾಯಿಸುತ್ತದೆ. ಈ ವರದಿಯಲ್ಲಿ ಆದಿಲ್‌ನ ಕುಟುಂಬಕ್ಕೆ ಸಮಗ್ರ ಪರಿಹಾರ ಒದಗಿಸಲು ಆಗ್ರಹಿಸಲಾಗಿದೆ. ಇದರಲ್ಲಿ ತಕ್ಷಣದ ಹಣಕಾಸಿನ ನೆರವು, ದೀರ್ಘಾವಧಿಯ ಬೆಂಬಲ, ಆತನ ಮಕ್ಕಳಿಗೆ ಶೈಕ್ಷಣಿಕ ನೆರವು ಮತ್ತು ಅವನ ಪತ್ನಿಗೆ ಉದ್ಯೋಗಾವಕಾಶ ನೀಡಬೇಕೆಂದು ಆಗ್ರಹಿಸಲಾಗಿದೆ. ಸಾಮೂಹಿಕ ಬಂಧನಗಳಲ್ಲಿ ಸರಿಯಾದ ಪ್ರಕ್ರಿಯೆಯ ಅನುಸರಣೆ ಮಾಡಬೇಕೆಂದು, ಪ್ರತಿಭಟನಾಕಾರರ ವಿರುದ್ಧದ ಕ್ರಮಗಳನ್ನು ರದ್ದುಗೊಳಿಸಬೇಕೆಂದು ಹಾಗು ಸಂತ್ರಸ್ತ ಕುಟುಂಬಗಳಿಗೆ ಕಾನೂನು ಮತ್ತು ಆರ್ಥಿಕ ಪರಿಹಾರ ಒದಗಿಸಬೇಕೆಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.